# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.153/2022** **ಪಿ . ಡಬ್ಲುಃ 3**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಜಿ ಸುರೇಶ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 16 -07 -2026. |

**ಪಾಟೀ ಸವಾಲುಃ ಶ್ರೀ ಡಿ ಎಂ ಜಿ ವಕೀಲರಿಂದಃ**

ನಾನು 2017 ರಿಂದ ನೋಟರಿ ಕೆಲಸವನ್ನು ಮಾಡುತ್ತಿದ್ದೇನೆ. ಪ್ರನೋಟ್ ನಲ್ಲಿ ಹಣವನ್ನು ಪಡೆದುಕೊಳ್ಳುವವರು ಒಂದನೇ ಪಕ್ಷಗಾರರು ಆಗಿರುತ್ತಾರೆ. ಸ್ಟಾಂಪ್ ಪೇಪರ್ ಅವಧಿ ಖರೀದಿ ಮಾಡಿದ ಮೂರು ವರ್ಷ ಗಳ ಕಾಲ ಅದರ ಅವಧಿ ಇರುತ್ತದೆ. ನಿಪಿ-1 ಅನ್ನು ದಿಃ 28-04-2018 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಲವನ್ನು ಪಡೆದ ದಿನಾಂಕದಂದೇ ಪತ್ರವನ್ನು ಖರೀದಿ ಮಾಡಿರುತ್ತಾರೆ. ಸದರಿ ಪತ್ರವನ್ನು ಮಾಡುವಾಗ ಹಣವನ್ನು ಪಡೆದುಕೊಳ್ಳುವವರು ಮತ್ತು ಹಣವನ್ನು ಕೊಡುವವರು ಮತ್ತು ಅವರ ಜೊತೆಗೆ ಸಾಕ್ಷಿದಾರರು ಇದ್ದರು ಆದರೆ ನನಗೆ ಸಾಕ್ಷಿದಾರರ ಹೆಸರು ನೆನಪಿರುವುದಿಲ್ಲ. ಹೆಚ್. ಡಿ ಚೆನ್ನಸ್ವಾಮಿ ಎನ್ನುವವರು ವಾದಿಯಿಂದ ಸಾಲವನ್ನು ಪಡೆದುಕೊಂಡಿರುವುದಿಲ್ಲ ಮತ್ತು ವಾದಿಗೆ ಅನುಕೂಲ ಆಗಲಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪತ್ರವನ್ನು ನೋಟರಿ ಮಾಡುವಾಗ ದಿನಾಂಕವನ್ನು ನೋಡಿ ಮಾಡಿರುತ್ತೇನೆ. ಪತ್ರದಲ್ಲಿ ಹೆಚ್. ಡಿ ಚೆನ್ನಸ್ವಾಮಿ ರವರು ಸಹಿ ಮಾಡಿರುವುದಿಲ್ಲ ಮತ್ತು ಆ ದಿನ ಪತ್ರ ಮಾಡುವಾಗ ಸಹ ಇರಲಿಲ್ಲ ಮತ್ತು ಅವರು ಸಾಲವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ಪತ್ರದಲ್ಲಿ ಇರುವ ಹೆಬ್ಬೆಟ್ಟಿನ ಗುರುತು ಹೆಚ್. ಡಿ ಚೆನ್ನಸ್ವಾಮಿ ರವರದ್ದಲ್ಲ ಎಂದರೆ ಸರಿಯಲ್ಲ. ಮತ್ತು ಪ್ರನೋಟ್ ನಲ್ಲಿ ಸಹ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**